




ಡಾ. ಎಸ್. ರಾಮಮೂರ್ತಿ


# 9-4-2015ರಿಂದ 15-4-2015ರವರೆಗೆ




ವಾರದ ಆರಂಭದಲ್ಲಿ ಚಂಚಲತೆ. ಕೆಲಸ ಕಾರ್ಯಗಳಲ್ಲಿ ನಿರಾಸಕ್ತಿ. ಅಕಾಲ ಭೋಜನ, ನಿದ್ರಾಹೀನತೆ, ವಾರದ ಮಧ್ಯಭಾಗದಿಂದ ಅನುಕೂಲ. ಉದ್ಯೋಗ ವೃತ್ತಿಗಳಲ್ಲಿ ಸಫಲತೆ. ಪ್ರಯಾಣ ಸೌಖ್ಯ, ಕುಟುಂಬದಲ್ಲಿ ಶಾಂತ ವಾತಾವರಣ. ಹಿರಿಯರೊಂದಿಗೆ ಚರ್ಚೆ. ಹಣದ ಸಮಸ್ಯೆ ಬಗೆ ಹರಿಯುವುದು. ಹಿತಕರ ಸಂದೇಶ. ಶುಭ ದಿನ: 13. ಶಿವ ಮತ್ತು ಸುಬ್ರಹ್ಮಣ್ಯ ಅಷ್ಟೋತ್ತರ ಪಠಿಸಿ.




ವಾರದ ಆರಂಭದಲ್ಲಿ ಭಯ. ನಿರ್ಧಾರ ತೆಗೆದು ಕೊಳ್ಳಲಾಗುವುದಿಲ್ಲ. ವಿರೋಧಿಗಳಿಂದ ಉಪದ್ರವ, ಲೇವಾದೇವಿಗಳಲ್ಲಿ ಹಾನಿ. ವಾರದ ಮಧ್ಯಭಾಗದಿಂದ ಚೇತರಿಕೆ. ಆತ್ಮವಿಶ್ವಾಸ ಹೆಚ್ಚುವುದು. ಕೆಲಸದಲ್ಲಿ ಸಫಲತೆ, ವ್ಯಾಪಾರದಲ್ಲಿ ಲಾಭ, ವಾಹನ ಯಂತ್ರೋಪಕರಣಗಳು ಸುಸ್ಥಿತಿಯಲ್ಲಿ ಸಂಘ– ಸಂಸ್ಥೆಗಳಿಂದ ಸಹಾಯ. ಶುಭ ದಿನ: 13. ಗಣೇಶ ಮತ್ತು ಸುಬ್ರಹ್ಮಣ್ಯ ಅಷ್ಟೋತ್ತರ.





ವಾರದ ಆರಂಭದಲ್ಲಿ ಸಂತಸ. ಕೆಲಸ ಕಾರ್ಯಗಳು ಫಲಪ್ರದವಾಗುವುದು. ವ್ಯಾಪಾರದಲ್ಲಿ ಸೂಕ್ತ ಲಾಭ, ವಾರದ ಮಧ್ಯಭಾಗದಲ್ಲಿ ಭಯ. ಆತ್ಮವಿಶ್ವಾಸ ಕುಗ್ಗುವುದು, ಉದ್ಯೋಗದಲ್ಲಿ ಒತ್ತಡ, ಲೇವಾದೇವಿಗಳಲ್ಲಿ ಹಾನಿ, ಆರೋಗ್ಯ ವ್ಯತ್ಯಯ, ಕುಟುಂಬ ಸದಸ್ಯರಲ್ಲಿ ಕಲಹ ಸಂಭವ, ಅಹಿತ ಭೋಜನ, ವಾರಾಂತ್ಯದಲ್ಲಿ ಮನಃಶಾಂತಿ. ಶುಭ ದಿನ: 10–4 ಗಣೇಶ ಮತ್ತು ಲಕ್ಷ್ಮೀ ಅಷ್ಟೋತ್ತರ ಪಠಿಸಿ.




ವಾರದ ಮಧ್ಯಭಾಗದವರೆಗೂ ಸೌಖ್ಯ. ಹಿರಿಯರ ಭೇಟಿ, ವ್ಯಾಪಾರ ರಂಗದಲ್ಲಿ ಲಾಭ ವೃದ್ಧಿ. ಶುಭ ಕಾರ್ಯ ಯೋಜನೆ, ಅಧ್ಯಯನದಲ್ಲಿ ಮೇಲುಗೈ, ತಕರಾರುಗಳಲ್ಲಿ ನ್ಯಾಯ ಪ್ರಾಪ್ತಿ, ಬಂಧುಗಳಿಂದ ಸಹಾಯ, ವಾರಾಂತ್ಯದಲ್ಲಿ ಬೇಸರ, ಆರೋಗ್ಯ ವ್ಯತ್ಯಯ, ವೃತ್ತಿ ಪ್ರವೃತ್ತಿಗಳಲ್ಲಿ ಹಿನ್ನಡೆ, ಶತ್ರು ಭೀತಿ, ವಿಪರೀತ ಖರ್ಚು. ಶುಭ ದಿನ: 12. ಲಕ್ಷ್ಮೀ ಮತ್ತು ವಿಷ್ಣು ಅಷ್ಟೋತ್ತರ ಪಠಿಸಿ.




ವಾರದ ಆರಂಭದಲ್ಲಿ ಅಶಾಂತಿ. ವಿರೋಧಿಗಳಿಂದ ಉಪದ್ರವ. ವಾಹನಗಳಿಂದ ತೊಂದರೆ, ಉದ್ಯೋಗದಲ್ಲಿ ಒತ್ತಡ. ವ್ಯಾಪಾರದಲ್ಲಿ ಪೈಪೋಟಿಯಿಂದ ಹಾನಿ. ವಾರದ ಮಧ್ಯಭಾಗದಿಂದ ಸಮಾಧಾನ, ಮನೋಬಲ ಹೆಚ್ಚುವುದು ಕೆಲಸ ಕಾರ್ಯಗಳು ಸರಾಗವಾಗಿ ನಡೆಯುವುದು, ದೇವತಾಕ್ಷೇತ್ರ ದರ್ಶನ, ಸಂತಸದ ಸುದ್ದಿ. ಶುಭ ದಿನ: 11. ಗಣೇಶ ಮತ್ತು ಲಕ್ಷ್ಮೀ ಅಷ್ಟೋತ್ತರ ಪಠಿಸಿ.





ವಾರದ ಆರಂಭದಲ್ಲಿ ಉತ್ಸಾಹ ಕುಗ್ಗುವುದು. ನಿರೀಕ್ಷಿತ ಫಲವಿಲ್ಲ, ವ್ಯಾಪಾರದಲ್ಲಿ ಲಾಭ. ವಾಹನಗಳ ದುರಸ್ಥಿಗೆ ಬರುವ ಸಾಧ್ಯತೆ, ಅಹಿತ ವಾರ್ತೆ, ವಾರದ ಮಧ್ಯಭಾಗದಿಂದ ಅನುಕೂಲ, ಅಭಿವೃದ್ಧಿ, ಆಪ್ತರಿಂದ ಸಹಾಯ, ವಿಶೇಷ ವಿಚಾರಗಳ ಪತ್ರಾಗಮನ, ಉದ್ಯೋಗದಲ್ಲಿ ಮನಃಶಾಂತಿ. ವಿದ್ಯಾಭ್ಯಾಸದಲ್ಲಿ ಪ್ರಗತಿ. ಶುಭ ದಿನ: 12. ಗಣೇಶ ಮತ್ತು ಲಕ್ಷ್ಮೀ ಅಷ್ಟೋತ್ತರ ಪಠಿಸಿ.




ವಾರದ ಆರಂಭದಲ್ಲಿ ಮನಃಶಾಂತಿ, ಸರಾಗವಾಗಿ ನಡೆಯುವ ಕೆಲಸ ಕಾರ್ಯಗಳು, ವ್ಯಾಪಾರದಲ್ಲಿ ತಕ್ಕ ಲಾಭ, ಸೋದರ ವರ್ಗದವರಿಂದ ಸಹಕಾರ. ಅನಾವಶ್ಯಕ ಖರ್ಚು, ವೃತ್ತಿ ಪ್ರವೃತ್ತಿಗಳಲ್ಲಿ ಹಿನ್ನಡೆ. ಹಿರಿಯರ ಮೇಲೆ ಸಿಟ್ಟು, ವಾಹನಗಳು ದುರಸ್ತಿಗೆ ಬರಬಹುದು, ಸಂದೇಶಗಳ ವಿಳಂಬ, ವಾರಾಂತ್ಯದಲ್ಲಿ ಮುನ್ನಡೆ. ಶುಭ ದಿನ: 10. ದುರ್ಗಾ ಮತ್ತು ದತ್ತಾತ್ರೇಯ ಅಷ್ಟೋತ್ತರ ಪಠಿಸಿ.




ವಾರದ ಮಧ್ಯಭಾಗದವರೆಗೂ ಸೌಖ್ಯ. ಅಡಚಣೆಯಿಲ್ಲದೆ ನಡೆಯುವ ಕಾರ್ಯಕಲಾಪಗಳು. ಆತ್ಮೀಯರಿಂದ ಸಹಾಯ. ಮಕ್ಕಳ ಮನಃಸ್ತಾಪ ದೂರ ಮಾಡುವ ಚಿಂತನೆ, ಪ್ರಯಾಣ ಸೌಖ್ಯ, ವಿರೋಧಿಗಳು ತಟಸ್ಥರಾಗುವರು, ವಾರಾಂತ್ಯದಲ್ಲಿ ಉತ್ಸಾಹ ಕುಗ್ಗುವುದು, ಆಟಪಾಠಗಳಲ್ಲಿ ನಿರಾಸಕ್ತಿ, ಆರೋಗ್ಯ ವ್ಯತ್ಯಯ. ಶುಭ ದಿನ: 12. ಗಣೇಶ ಮತ್ತು ಗುರು ಅಷ್ಟೋತ್ತರ ಪಠಿಸಿ.




ವಾರದ ಆರಂಭದಲ್ಲಿ ಒತ್ತಡ. ಕೋಪದ ಮಾತುಗಳು. ಉದ್ಯೋಗದಲ್ಲಿ ಅಧಿಕಾರ ವರ್ಗದವರೊಂದಿಗೆ ಕಲಹ. ಲೇವಾದೇವಿಗಳಲ್ಲಿ ಹಾನಿ, ಅನಾರೋಗ್ಯ, ವಾರದ ಮಧ್ಯಭಾಗದಿಂದ ಅನುಕೂಲ, ನಿರೀಕ್ಷಿತ ಸಂದೇಶಗಳ ಆಗಮನ. ಕೆಲಸ ಕಾರ್ಯಗಳಲ್ಲಿ ಯಶಸ್ಸು. ಮಕ್ಕಳ ಸಹಾಯ, ಕುಟುಂಬದಲ್ಲಿ ಹಿತಕರ ವಾತಾವರಣ. ಶುಭ ದಿನ: 13. ಗಣೇಶ ಮತ್ತು ಲಕ್ಷ್ಮೀ ಅಷ್ಟೋತ್ತರ ಪಠಿಸಿ.




ವಾರದ ಆರಂಭದಲ್ಲಿ ಆತಂಕ. ಕುಟುಂಬ ಸದಸ್ಯರ ಮೇಲೆ ಸಿಟ್ಟು. ವೃತ್ತಿ ಪ್ರವೃತ್ತಿಗಳಲ್ಲಿ ಹಿನ್ನಡೆ. ವಾಹನಗಳಿಂದ ತೊಂದರೆ, ವಾರದ ಮಧ್ಯಭಾಗದಿಂದ ಮನಃಶಾಂತಿ. ಮಿತ್ರರಿಂದ ಸಹಾಯ, ನಿರೀಕ್ಷೆಯಂತೆ ಕಾರ್ಯ ಸಿದ್ಧಿ, ವ್ಯಾಪಾರ ರಂಗದಲ್ಲಿ ಲಾಭ, ತಕರಾರುಗಳು ಬಗೆಹರಿಯುವುವು, ಗೃಹ ನವೀಕರಣ ಚಿಂತನೆ, ಪ್ರಯಾಣ ಸೌಖ್ಯ. ಶುಭ ದಿನ: 13. ಲಕ್ಷ್ಮೀ ಮತ್ತು ವಿಷ್ಣು ಅಷ್ಟೋತ್ತರ ಪಠಿಸಿ.




ವಾರದ ಆರಂಭದಲ್ಲಿ ಸಂತಸ. ಶ್ರಮವಿಲ್ಲದೆ ಕೆಲಸ ಕಾರ್ಯ ಸಿದ್ಧಿ. ಹಿತಕರ ಸಂದೇಶ, ವಾರದ ಮಧ್ಯಭಾಗದಲ್ಲಿ ಒತ್ತಡ. ಆರೋಗ್ಯ ವ್ಯತ್ಯಯ, ಕುಟುಂಬದಲ್ಲಿ ಅಶಾಂತಿ, ನಿಯಮಗಳನ್ನು ಮೀರಿ ದಂಡಕಟ್ಟುವ ಸಂಭವ, ಕಳ್ಳಕಾಕರ ಭೀತಿ, ಉದ್ಯೋಗದಲ್ಲಿ ತಪ್ಪಾಗುವಿಕೆ, ವಾರಾಂತ್ಯದಲ್ಲಿ ಸಮಾಧಾನ. ಶುಭ ದಿನ: 10. ಗಣೇಶ ಮತ್ತು ದತ್ತಾತ್ರೇಯ ಅಷ್ಟೋತ್ತರ ಪಠಿಸಿ.




ವಾರದ ಮಧ್ಯಭಾಗದವರೆಗೂ ಅನುಕೂಲ. ಕುಟುಂಬ ಸದಸ್ಯರಲ್ಲಿ ಹೊಂದಾಣಿಕೆ. ಉದ್ಯೋಗದಲ್ಲಿ ಮನಃಶಾಂತಿ. ಅಧ್ಯಯನದಲ್ಲಿ ಪ್ರಗತಿ, ಮಕ್ಕಳಿಂದ ಸಹಾಯ, ದೇವತಾಕ್ಷೇತ್ರ ದರ್ಶನ, ಗುರು ಹಿರಿಯರೊಂದಿಗೆ ಚರ್ಚೆ. ವಾರಾಂತ್ಯದಲ್ಲಿ ಶ್ರಮ, ಅನಾವಶ್ಯಕ ಖರ್ಚು, ಆರೋಗ್ಯ ವ್ಯತ್ಯಯ, ಕಾರ್ಯಸಾಧನೆ, ವ್ಯವಹಾರಗಳಲ್ಲಿ ನಷ್ಟ. ಶುಭ ದಿನ: 11.ಗಣೇಶ ಮತ್ತು ಲಕ್ಷ್ಮೀ ಅಷ್ಟೋತ್ತರ ಪಠಿಸಿ.